

ಪ್ರಯಾಣಿಕರ ಹಡಗು



ಸಿಂಗಿಂಗ್ ಸ್ಯಾಂಡ್ ದ್ವೀಪದಲ್ಲಿ ಲೇಖಕರು





ನೀರಿನಲ್ಲಿ ಮುಳುಗಿದ ಹಡಗಿನ ಭಗ್ನಾವಶೇಷಗಳು

ಕೂಡಿದೆ. ಎರಡು ಕಲ್ಲಿನ ದಿನ್ನೆಗಳನ್ನು ಹೊಂದಿದ್ದು. ಒಂದು ದೊಡ್ಡದು ಮತ್ತೊಂದು ಸ್ವಲ್ಪ ಚಿಕ್ಕದು. ಈ ದಿನ್ನೆಗಳು ಫ್ಲವರ್ ಪಾಟಿನ ಆಕಾರದಲ್ಲಿರುವುದರಿಂದ ಈ ದ್ವೀಪಕ್ಕೆ ಈ ಹೆಸರು ಬಂದಿದೆಯಂತೆ. ಸಾವಿರಾರು ವರ್ಷಗಳ ಹಿಂದೆ ಈ ಸರೋವರಗಳ ನೀರಿನ ಮಟ್ಟ 20 ಅಡಿಗಳಷ್ಟು ಮೇಲಿತ್ತಂತೆ. ಕಾಲ ಉರುಳಿದಂತೆ ನೀರಿನ ಮಟ್ಟವು ಕಡಿಮೆಯಾಗುತ್ತ ಬಂದು. ಬಂಡೆ ಕಲ್ಲುಗಳು ನೀರಿನ ಕೊರೆತಕ್ಕೆ ಒಳಪಟ್ಟು ಪದರು ಪದರಾಗಿ 10 ರಿಂದ 20 ಅಡಿ ಎತ್ತರದ ಫ್ಲವರ್ ಪಾಟ್‌ಗಳ ಆಕೃತಿಯನ್ನು ಹೊಂದಿವೆಯಂತೆ. ಈ ದ್ವೀಪದೊಳಗೆ ಒಂದು ಪ್ರಾಕೃತಿಕ ಗುಹೆ ಮತ್ತು ಲೈಟ್ ಹೌಸ್ ಕೂಡಾ ಇದೆ.

ಟೋಬರ್ ಮೋರಿ ಬಂದರಿನಿಂದ ಸೌತ್ ಮೌತಿಗೆ 50 ಕಿ.ಲೋ. ದೂರಕ್ಕೆ ಪ್ರವಾಸಿಗರು ಮತ್ತು ವಾಹನಗಳನ್ನು ಸಾಗಿಸಲು ಕಡವಿನ ವ್ಯವಸ್ಥೆ ಇದೆ. ಓವನ್ ಸೌಂಡ್ ಟ್ರಾನ್ಸ್‌ಪೋರ್ಟ್ ಕಂಪೆನಿ ಇದರ ಉಸ್ತುವಾರಿಯಲ್ಲಿದೆ. ಸುಮಾರು 638 ಜನ ಮತ್ತು 143 ವಾಹನಗಳನ್ನು ಸಾಗಿಸುವ ಸಾಮರ್ಥ್ಯ ಹೊಂದಿದ ಹಡಗಿನ ಮೂಲಕ ಸಾಗಾಟ ವ್ಯವಸ್ಥೆಯು ನಿರ್ವಹಿಸಲ್ಪಡುತ್ತಿದೆ. ದಿನವೂ ನೂರಾರು ಜನರು ಈ ಸಾರಿಗೆ ಸೌಲಭ್ಯವನ್ನು ಉಪಯೋಗಿಸಿಕೊಂಡು ರಸ್ತೆಯ ಮೂಲಕ ತಗಲುವ ಸುಮಾರು 600 ಕಿ.ಮೀ. ದೂರವನ್ನು ಕೇವಲ ಕೆಲವೇ ಗಂಟೆಗಳಲ್ಲಿ ಕ್ರಮಿಸುತ್ತಾರೆ.

ಟೋಬರ್ ಮೋರಿ ಬಂದರಿನ ಪಕ್ಕ 15 ಕಿ.ಮೀ. ದೂರದಲ್ಲಿ 'ಸಿಂಗಿಂಗ್ ಸ್ಯಾಂಡ್ಸ್' ಎಂಬ ಹೆಸರಿನ ಬೀಚ್ ಇದೆ. ಸಿಹಿ ನೀರಿನ ಸರೋವರದ ಈ ಬೀಚಿನಲ್ಲಿ ನೀರಿನ ಅಲೆಗಳು ಸಮುದ್ರದ ಅಲೆಯಷ್ಟು ದೊಡ್ಡದಾಗಿಲ್ಲ. ಆದರೆ ನೀರು ಬಹಳ ತಿಳಿಯಾಗಿದ್ದು 20 ರಿಂದ 30 ಅಡಿಗಳಷ್ಟು ಆಳದ ತಳವನ್ನು ಸುಲಭವಾಗಿ ನೋಡಬಹುದು. 'ಜಾರ್ಜಿಯನ್ ಬೇ' ಸರೋವರವು ಬೀಚ್ ಪ್ರದೇಶದಲ್ಲಿ ಆಳ ಕಡಿಮೆ ಇದ್ದು ದೂರ ಹೋದಂತೆ ಆಳ ಸುಮಾರು 550 ಅಡಿಗಳಷ್ಟು ಹೆಚ್ಚಾಗುತ್ತದೆ.